(ಪಿ.ಡಬ್ಲ್ಯೂ.1) ದಿನಾಂಕಃ 11.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆ ಅರ್ಜಿದಾರರ ಪರವಾಗಿ. ಶ್ರೀ.ಬಿ.ಬಿ.ಹೆಚ್ ವಕೀಲರಿಂದ

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯಗಳು ಸರಿ ಇದ್ದು ಅದಕ್ಕೆ ನಾನು ಸಹಿ ಮಾಡಿರುತ್ತೇನೆ.

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರಪಡಿಸಿರುತ್ತೇನೆ.

1) ಪ್ರೊಟೇಪ್ಟ ಪೇಟಿಶನ ಕಾಪಿಯನ್ನು ನಿ.ಪಿ.1 ಎಂದು ಗುರುತಿಸಲಾಯಿತು.

1(ಎ) ಪ್ರೊಟೇಪ್ಟ ಅಮೇಂಡಮೆಂಟ ಪೀಟಿಶನ ನಿ.ಪಿ.1(ಎ) ಎಂದು ಗುರುತಿಸಲಾಯಿತು.

2) ಅವಾರ್ಡ ನೋಟಿಸನ್ನು ಹಾಜರಪಡಿಸಿದ್ದು ನಿ.ಪಿ.2 ಎಂದು ಗುರುತಿಸಲಾಯಿತು.

3) ಅವಾರ್ಡ ಕಾಪಿ ಹಾಜರಪಡಿಸಿದ್ದು ಅದನ್ನು ನಿ.ಪಿ.3 ಎಂದು ಗುರುತಿಸಲಾಯಿತು.

4) ಯಾದಗಿರಿ ಜಿಲ್ಲಾ ನ್ಯಾಯಾಲಯದ ಎಲ್.ಎ.ಸಿ. ನಂ.6/2022 ಪ್ರಕರಣದ ತೀರ್ಪಿನ ದೃಢೀಕೃತ ನಕಲು ಹಾಜರಪಡಿಸಿದ್ದು ಅದನ್ನು ನಿ.ಪಿ.4 ಎಂದು ಗುರುತಿಸಲಾಯಿತು.

5) ಯಾದಗಿರಿ ಜಿಲ್ಲಾ ನ್ಯಾಯಾಲಯದ ಎಲ್.ಎ.ಸಿ. ನಂ.49/2021 ಪ್ರಕರಣದ ತೀರ್ಪಿನ ದೃಢೀಕೃತ ನಕಲು ಹಾಜರಪಡಿಸಿದ್ದು ಅದನ್ನು ನಿ.ಪಿ.5 ಎಂದು ಗುರುತಿಸಲಾಯಿತು.

6) ವಿಜಯಪುರ ಜಿಲ್ಲಾ ನ್ಯಾಯಾಲಯದ ಎಲ್.ಎ.ಸಿ. ನಂ.446/2020 ದಿಃ 09.11.2023 ರ ಪ್ರಕರಣದ ತೀರ್ಪಿನ ದೃಢೀಕೃತ ನಕಲು ಹಾಜರಪಡಿಸಿದ್ದು ಅದನ್ನು ನಿ.ಪಿ.6 ಎಂದು ಗುರುತಿಸಲಾಯಿತು.

7) ವಿಜಯಪುರ ಜಿಲ್ಲಾ ನ್ಯಾಯಾಲಯದ ಎಲ್.ಎ.ಸಿ. ನಂ.422/2020 ದಿಃ 13.10.2023 ರ ಪ್ರಕರಣದ ತೀರ್ಪಿನ ದೃಢೀಕೃತ ನಕಲು ಹಾಜರಪಡಿಸಿದ್ದು ಅದನ್ನು ನಿ.ಪಿ.7 ಎಂದು ಗುರುತಿಸಲಾಯಿತು.

8) ಸರ್ವೆ ನಂ. 45/5 ರ ಕಮಾಲಪೂರ ಗ್ರಾಮದ 2025-26 ರ ಪಹಣಿ ಪತ್ರಿಕೆ ಹಾಜರಪಡಿಸಿದ್ದು ಅದನ್ನು ನಿ.ಪಿ.8 ಎಂದು ಗುರುತಿಸಲಾಯಿತು.

ಪಾಟೀ ಸವಾಲು 1 ನೇ ಎದುರುದಾರರ ಪರವಾಗಿ ಶ್ರೀ. ಎಮ್. ಎಸ್. ಪಾಟೀಲ ವಕೀಲರಿಂದ

1. ನನ್ನ ಜಮೀನು ಸರ್ವೆ ನಂಬರ 45/5 ಇದ್ದು, ಇದರಲ್ಲಿ 14 ಗುಂಟೆ ಜಮೀನನ್ನು ಸರ್ಕಾರದವರು ಬೂದಿಹಾಳ-ಪೀರಾಪೂರ ಏತನೀರಾವರಿ ಯೋಜನೆಯ ಮುಖ್ಯ ಕೊಳವೆ ಮಾರ್ಗ ಕಾಲುವೆಗಾಗಿ ಭೂ-ಸ್ವಾಧೀನಪಡಿಸಿಕೊಂಡಿರುತ್ತಾರೆ. ನಮ್ಮ ಜಮೀನು ನೀರಾವರಿ ಜಮೀನು ಆಗಿರುತ್ತದೆ. ಸರ್ಕಾರದವರು ಸರಿಯಾದ ಪರಿಹಾರ ಧನವನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಜಮೀನಿನಲ್ಲಿ ಪ್ರತಿ ಎಕರೆಗೆ ಪ್ರತಿ ವರ್ಷ 4-5 ಲಕ್ಷ ರೂಪಾಯಿ ಆದಾಯ ಬರುತ್ತಿದ್ದು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಬ್ಬು, ಹತ್ತಿ, ಇರುಳಿ ಹಾಗೂ 2 ನೇ ಬೆಳೆ(ಹಿಂಗಾರಿ) ಗೋಧಿ, ಕಡಲೆ, ಕುಸುಬೆ, ಜೋಳ, ಬೆಳೆಯುತ್ತಿದ್ದು, ಕಬ್ಬುನ್ನು ಪ್ರತಿ ಎಕರೆಗೆ 80-90 ಟನ್ ಬೆಳೆಯುತ್ತಿದ್ದು, ಅದೇ ರೀತಿಯಾಗಿ ಹತ್ತಿ 10-15 ಕ್ವಿಂಟಲ್, ಇರುಳಿ ಪ್ರತಿ ಎಕರೆಗೆ 40-50 ಕ್ವಿಂಟಲ್ ಹಾಗೂ ಜೋಳ ಪ್ರತಿ ಎಕರೆಗೆ 10 ಕ್ವಿಂಟಲ್, ಗೋಧಿ ಪ್ರತಿ ಎಕರೆಗೆ 10-15 ಕ್ವಿಂಟಲ್ ಬೆಳೆಯುತ್ತಿದ್ದೇನೆ ಎಂದು ನಾನು ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಲ್ಲ. ಅದೇ ರೀತಿ ವಿಜಯಪುರ ಜಿಲ್ಲೆಯಲ್ಲಿ ಗ್ರಾಮಗಳಾದ ಮಸ್ಕನಾಳ, ಬೀಳೆಬಾವಿ, ತಾಳಿಕೋಟಿ ಹಾಗೂ ಮ್ಯಲೇಶ್ವರ ಗ್ರಾಮದ ಜಮೀನುಗಳನ್ನು ಮತ್ತು ನನ್ನ ಜಮೀನು ಒಂದೇ ತರಹ ಆಗಿರುವುದಿಲ್ಲ ಎಂದರೆ ಸರಿಯಲ್ಲ. ವಿಜಯಪುರ ಮಾನ್ಯ ನ್ಯಾಯಾಲಯ ಪ್ರತಿ ಎಕರೆಗೆ ರೂ. 8,00,000/- ಲಕ್ಷ ರೂಪಾಯಿ ಪರಿಹಾರ ಧನ ಕೊಟ್ಟಿರುತ್ತಾರೆ, ಅಪೀಲು ಮಾಡಲು ಯೋಗ್ಯ ಪ್ರಕರಣ ಅಲ್ಲ ಎಂದು ಅಭಿಪ್ರಾಯ ಕೊಟ್ಟಿದ್ದು, ಈ ಪ್ರಕರಣಕ್ಕೆ ಸಂಬಂಧಿಸುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿಯಾಗಿ ಮಾನ್ಯ ಯಾದಗಿರಿ ಜಿಲ್ಲಾ ನ್ಯಾಯಾಲಯದಲ್ಲಿ ಎಲ್.ಎ.ಸಿ ನಂಬರ 6/2022, 49/2021 ಈ ಪ್ರಕರಣದಲ್ಲಿ ರೂ. 8,40,000/- ಲಕ್ಷಗಳನ್ನು ನಿಗದಿ ಪಡಿಸಿದ್ದು, ಇದೇ ಉದ್ದೇಶಕ್ಕಾಗಿ ಈ ಕೇಸಿನಲ್ಲಿ ಕೇಳುವುದು ಸರಿಯಲ್ಲ ಎಂದರೆ ಸರಿಯಲ್ಲ. ಪರಸ್ಪರ ಆ ಭೂಮಿ ಮತ್ತು ನನ್ನ ಜಮೀನು ಭಿನ್ನವಾಗಿದ್ದರಿಂದ ಆ ಪರಿಹಾರ ಧನ ಪಡೆಯಲು ನಾನು ಅರ್ಹನಿರುವುದಿಲ್ಲ ಎಂದರೆ ಸರಿಯಲ್ಲ. ಈ ಎಲ್ಲ ದಾಖಲಾತಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ ಪ್ರತಿ ಎಕರೆಗೆ 70,00,000/- ಲಕ್ಷ ರೂಪಾಯಿ ಇರುತ್ತದೆ ಅಂತಾ ಕೇಳುವುದು ಸರಿಯಲ್ಲ. ಈ ಮೊದಲು ಸರ್ಕಾರದವರು ಕೊಟ್ಟಂತ ಪರಿಹಾರದ ಹಣ ಸರಿಯಾಗಿರುತ್ತದೆ

ಎಂದರೆ ಸರಿಯಲ್ಲ. ನಾನು ಹೆಚ್ಚಿಗೆ ಪರಿಹಾರ ಹಣ ಪಡೆಯಲು ಅರ್ಹನಾಗಿರುವುದಿಲ್ಲ ಎಂದರೆ ಸರಿಯಲ್ಲ.

2. ನಿ.ಪಿ.3 ನೋಡಿದ್ದು ಅದು ಐ-ತೀರ್ಪು ಇದ್ದು, ಅದರಲ್ಲಿನ ಮಾರುಕಟ್ಟೆ (ಬೆಲೆ) ನಿಗದಿಪಡಿಸಲಾದ ಪ್ಯಾರಾ ನಂ.14, ಅದನ್ನು ನಿ.ಆರ್.1 ಎಂದು ಗುರುತಿಸಲಾಯಿತು.

ಪಾಟೀ ಸವಾಲು 2 ನೇ ಎದುರುದಾರರ ಪರವಾಗಿ ಡಿ.ಜಿ.ಪಿ ವಕೀಲರಿಂದ

ಮೇಲಿನ ಪಾಟಿಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿರುತ್ತಾರೆ.

ಪಾಟೀ ಸವಾಲು 3 ನೇ ಎದುರುದಾರರ ಪರವಾಗಿ ಶ್ರೀ. ಎಸ್. ಆರ್. ವಕೀಲರಿಂದ

3 ನೇ ಎದುರುದಾರರ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಯಾದಗಿರಿ.